ಬೊಂಬಾಯಿ ಶಹರವೊಂದರಲ್ಲೇ ಹತ್ತು ಲಕ್ಷ ಜನ ಕನ್ನಡಿಗರು ಇದ್ದಾರೆ. ಕಳೆದ ನಾಲ್ಕೈದು ವರ್ಷಗಳಿಂದ ಅಲ್ಲಿ ಶಾಂತಿ ಇದೆ. ಅದಕ್ಕೂ ಹಿಂದೆ ಕನ್ನಡಿಗರ ಮೇಲೆ ಯಾವ ದಬ್ಬಾಳಿಕೆ ಆಯಿತು, ಕನ್ನಡಿಗರ ಆಸ್ತಿಪಾಸ್ತಿಗಳನ್ನು ಯಾವ ರೀತಿ ಲೂಟಿ ಮಾಡಿದರು, ಬೆಂಕಿ ಹಚ್ಚಿದರು, ಎಷ್ಟು ಜನ ಕನ್ನಡಿಗರನ್ನು ಕೊಂದರು ಎಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕು. ಅದಕ್ಕೋಸ್ಕರ ನಾನು ಸಾರಿ ಸಾರಿ ಹೇಳುತ್ತೇನೆ. ಏನೆಂದರೆ ಭಾಷೆಯಂತಹ ಭಾವನಾ ಪ್ರಧಾನವಾದ ವಿಷಯವನ್ನು ತೆಗೆದುಕೊಂಡು ಅದು ಪ್ರಕೋಪಕ್ಕೆ ಹೋಗುವ ಹಾಗೆ ಭಾಷಣವನ್ನು ನಾವು ಮಾಡಬಾರದು. ಭಾಷೆಯ ಬಗ್ಗೆ ಅಭಿಮಾನ ಬೇಕು. ಆದರೆ ಬೇರೆಯವರಿಗೂ ಕೂಡ ತಮ್ಮ ಭಾಷೆ ಬೇಕೆನ್ನುವ ವಿಷಯವನ್ನು ಸಹಿಸಬೇಕಾಗುತ್ತದೆ. ನಮಗೆ ಮಾತ್ರ ಭಾಷೆ ಬೇಕು, ಬೇರೆಯವರ ಭಾಷೆಯನ್ನು ಸಹಿಸತಕ್ಕದ್ದಲ್ಲ ಎನ್ನುವ ನಿಲುವು ಸಾಧುವಾದುದಲ್ಲ. ನನಗೆ ಒಂದು ಸಲ ನೆನಪು ಮಾಡಿಕೊಂಡರೆ ಕಳವಳವಾಗುತ್ತದೆ. ಈಗ ಎಂಟು ಹತ್ತು ವರ್ಷಗಳ ಹಿಂದೆ ಮಹಾರಾಷ್ಟ್ರದಲ್ಲಿ ಪುಣೆಯಲ್ಲಿ ಕೊಲ್ಲಾಪುರ, ಸೊಲ್ಲಾಪುರದಲ್ಲಿ ಬೊಂಬಾಯಿ ಬಿಟ್ಟು ಬೇರೆ ಕಡೆಗಳಲ್ಲಿ ಏನೇನು ಅನಾಹುತ ಆಯಿತು ಅನೇಕ ಕನ್ನಡಿಗರಿಗೆ ಸೇರಿದ ಹೋಟೆಲುಗಳನ್ನು ಸುಟ್ಟು ಹಾಕಲಾಯಿತು. ಲಕ್ಷಾಂತರ ರೂಪಾಯಿ ಯಷ್ಟು ಹಾನಿಯಾಗಿದೆ. ಆದ್ದರಿಂದ ಭಾಷೆ ವಿಷಯದಲ್ಲಿ ನಾವು ಸಂಯಮದಿಂದಲೇ ವರ್ತಿಸಬೇಕಾಗುತ್ತದೆ. ಬಾಳ ಠಾಕರೆಯವರು ಎತ್ತಿರುವ ವಿಷಯದ ಬಗ್ಗೆ ಮಹಾರಾಷ್ಟ್ರದ ಮುಖ್ಯಮಂತ್ರಿಯವರಿಗೆ ನಾನು ಈಗಾಗಲೇ ಪತ್ರವನ್ನು ಬರೆದಿದ್ದೇನೆ. ಯಾವುದೇ ರೀತಿಯಿಂದ ಕನ್ನಡಿಗರ ಹಕ್ಕು ಅವರ ಆಸ್ತಿಪಾಸ್ತಿ, ಪ್ರಾಣಕ್ಕೆ ಗಂಡಾಂತರ ಬಾರದಂತೆ ನೋಡಿಕೊಳ್ಳಬೇಕೆಂದು ಈಗಾಗಲೇ ತಿಳಿಸಿದ್ದೇನೆ.

(vii) ಪಡಿತರದಲ್ಲಿ ಕೊಡುತ್ತಿರುವ ಕಳಪೆ ಆಹಾರ ಧಾನ್ಯಗಳ ಬಗ್ಗೆ

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾನು ಹರಿಜನರ ಸಾಗುವಳಿ ಬಗ್ಗೆ ಒಂದು ಸೂಚನೆ ಮತ್ತು ಆಹಾರ ನಿಗಮದವರ ಪಡಿತರ ವ್ಯವಸ್ಥೆ ಬಗ್ಗೆ ಒಂದು ಸೂಚನೆ ಕಳುಹಿಸಿದ್ದೇನೆ.

ಅಧ್ಯಕ್ಷರು.—ತಾವು ಯಾವುದಾದರೂ ಒಂದು ಸೂಚನೆ ಬಗ್ಗೆ ಮಾತ್ರ ಮಾತನಾಡಿ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ.—ನಾನು ಕರ್ನಾಟಕ ಆಹಾರ ನಿಗಮದ ಪಡಿತರ ವ್ಯವಸ್ಥೆ ಬಗ್ಗೆ ಅವರ ವ್ಯಾಪಾರದ ಹಾಗೂ ಗುಣಮಟ್ಟದ ಬಗ್ಗೆ ಈಗ ಹೇಳುತ್ತೇನೆ. ಅವರು ಈ ಪದಾರ್ಥವನ್ನು ಕೊಡಬೇಕಾದರೆ ನಗದು ಬಿಲ್ಲು ಹಾಕುವುದಿಲ್ಲ. ಡೆಲಿವರಿ ನೋಟನ್ನು ತರಿಸಿಕೊಂಡು ಅದರಲ್ಲಿ ರುಜು ಹಾಕಿಸಿಕೊಳ್ಳುತ್ತಾರೆ. ಅದರಲ್ಲಿ ತೂಕ ಮತ್ತು ಇತರ ವ್ಯವಸ್ಥೆಗಳು ಉತ್ತಮ ರೀತಿಯಲ್ಲಿದೆ ಎನ್ನುವುದನ್ನು ಪ್ರಿಂಟ್ ಮಾಡಿಸಿದ್ದಾರೆ. ಅದರ ಮೇಲೆ ಅವರು ರುಜು ತೆಗೆದುಕೊಂಡು ಇವರಿಗೆ ಕೊಡುತ್ತಾರೆ. ನಾನು ಅವರು ವ್ಯಾಪಾರ ಮಾಡಿದ ಕಳಪೆ ಗೋಧಿಯ ಬಗ್ಗೆ ಈಗ ಸ್ಯಾಂಪಲ್ ತಂದಿದ್ದೇನೆ. ಅದನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ. ಇದರ ಬಗ್ಗೆ ನನಗೆ ಅವರು ವಿವರಣೆಯನ್ನು ಕೊಡಬೇಕಾಗುತ್ತದೆ, ಎಲ್ಲಾ ಕಡೆಯೂ ಇದೇ ರೀತಿ ನಡೆಯುತ್ತಾ ಇದೆ. ಎರಡು ಸೊಸೈಟಿಯವರು ಇದರ ಬಗ್ಗೆ ಮಹಜರ್ ನಡೆಸಿ ಆಹಾರ ನಿಗಮಕ್ಕೆ ದೂರು ಕೊಟ್ಟಿದ್ದರೂ ಸಹ ಅವರು ಕಿವಿಗೊಡುತ್ತಾ ಇಲ್ಲ. ಗುಲ್ಬರ್ಗಾದ ಒಂದು ಸೊಸೈಟಿಯವರು ಇದರ ಬಗ್ಗೆ ಒಂದು ಪತ್ರವನ್ನು ಬರೆದಿದ್ದಾರೆ ಅದನ್ನು ಮತ್ತು ಈ ಕಳಪೆ ಗೋಧಿ ಎರಡನ್ನೂ ಸಹ ಮಾನ್ಯ ಮಂತ್ರಿಗಳಿಗೆ ಮಾನ್ಯ ಅಧ್ಯಕ್ಷರ ಮುಖಾಂತರ ಕಳುಹಿಸಿಕೊಟ್ಟು, ಸರ್ಕಾರದ ಗಮನವನ್ನು ಇದರ ಬಗ್ಗೆ ಸೆಳೆಯಬಯಸುತ್ತೇನೆ.

ಅಧ್ಯಕ್ಷರು.—ತಾವು ಇದನ್ನು ಸ್ವೀಕಾರ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಸ್ವೀಕಾರ ಮಾಡುತ್ತೇನೆ.

(ಮಾನ್ಯ ಸದಸ್ಯರು ತಂದಿರತಕ್ಕಂಥಾ ಕಳಪೆ ಗೋಧಿ ಮತ್ತು ಅದರ ಜೊತೆಯಲ್ಲಿ ಒಂದು ಪತ್ರ ಇವೆರಡನ್ನೂ ಕೂಡ ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಯವರಿಗೆ ಕಳುಹಿಸಿಕೊಟ್ಟರು.)

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಸ್ವಲ್ಪ ವಿವರಣೆಯನ್ನು ಹೇಳಬಯಸುತ್ತೇನೆ. ಅದೇನೆಂದರೆ ನಾವು ಈ ಆಹಾರ ಪದಾರ್ಥಗಳನ್ನು ಆಹಾರ ನಿಗಮದ

ಮುಖಾಂತರ ಸುಲಭ ಬೆಲೆಯಲ್ಲಿ ದುರ್ಬಲವರ್ಗದವರಿಗೆ ಹಾಗೂ ಬಡವರ್ಗದವರಿಗೆ ಹಂಚುವ ಒಂದು ವ್ಯವಸ್ಥೆ ಮಾಡಿದ್ದೇವೆ. ಈಗ ಮಾನ್ಯ ಸದಸ್ಯರು ನನಗೆ ಕಳಪೆ ಗೋಧಿ ಏನು ಕಳುಹಿಸಿ ಕೊಟ್ಟಿದ್ದಾರೋ ಮತ್ತು ಅದರಲ್ಲಿ ಏನು ಲೋಪದೋಷಗಳು ಇವೆ ಅನ್ನುವುದನ್ನು ಕಂಡುಹಿಡಿದು ತಪ್ಪಿತಸ್ಥರ ಮೇಲೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇನೆ ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು.—ಈಗ ಮುಂದಿನ ವಿಷಯಕ್ಕೆ ಹೋಗೋಣ.

(viii) ಜಿಲ್ಲಾ ಸಹಕಾರಿ ಬ್ಯಾಂಕ್ ನೌಕರರ ಮುಷ್ಕರ

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಈಗ ಸುಮಾರು ೬ ಸಾವಿರ ಜಿಲ್ಲಾ ಸಹಕಾರಿ ಬ್ಯಾಂಕ್‌ನ ನೌಕರರು ಏನು ಮುಷ್ಕರ ಹೂಡಿದ್ದಾರೆ ಅದರ ಬಗ್ಗೆ ನನಗೆ ಟೋಟಲ್ ಸಕ್ಸಸ್ ಅನ್ನುವ ಟೆಲಿಗ್ರಾಂ ಬಂದಿದೆ. ಬೆಂಗಳೂರಿನಿಂದ ಬಂದಿದೆ, ಧಾರವಾಡದಿಂದ ಬಂದಿದೆ ಇನ್ನೂ ಇತರ ಬೇರೆ ಬೇರೆ ಕಡೆಗಳಿಂದ ಟೆಲಿಗ್ರಾಂ ಬಂದಿದೆ. ಡಿಮ್ಯಾಂಡ್ ಏನು ಎಂದರೆ, ಸರ್ಕಾರದವರು ಅವರ ಬ್ಯಾಂಕ್‌ನಲ್ಲಿ ಅಲ್ಲಿರುವ ನೌಕರರಿಗೆ ಏನು ಒಂದು ಸ್ಕೇಲ್ ಕೊಡುತ್ತಾ ಇದ್ದಾರೋ ಅದೇ ಸ್ಕೇಲನ್ನು ನಮಗೂ ಕೊಡಬೇಕು ಅಂತ ಕೇಳುತ್ತಿದ್ದಾರೆ. ಸರ್ಕಾರದವರು ಇದನ್ನು ಪರಿಶೀಲಿಸುತ್ತೇವೆ, ಪರಿಶೀಲಿಸುತ್ತೇವೆ ಅಂತ ಹೇಳಿಕೊಂಡು ಕೊನೆಗೆ ಇದಕ್ಕೆ ಒಂದು ಸಬ್ ಕಮಿಟಿ ಮಾಡಿದರು. ಅದರಲ್ಲಿ ಎಲ್ಲಾ ಜಿಲ್ಲಾ ಬ್ಯಾಂಕ್ ಅಧ್ಯಕ್ಷರೂ ಸೇರಿ ಇದರ ಬಗ್ಗೆ ಒಂದು ಇತ್ಯರ್ಥ ಮಾಡಿದರೆ ಚೆನ್ನಾಗಿತ್ತು. ಈ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರು ಹಿಂದೆ ಕಾರವಾರ ಬ್ಯಾಂಕ್‌ನ ಅಧ್ಯಕ್ಷರಾಗಿದ್ದರು. ಅವರು ತಮ್ಮ ನೌಕರರಿಗೆ ಏನು ಹೇಳಿದರು ಎಂದರೆ ನೀವು ಚಳುವಳಿ ಮಾಡುವುದು ಬೇಡ, ನಿಮಗೆ ನಾವು ಸರ್ಕಾರೀ ನೌಕರರ ಸ್ಕೇಲನ್ನೇ ಕೊಡುತ್ತೇವೆ ಅಂತ ಹೇಳಿ ಕೊಡುತ್ತಾ ಬಂದರು. ಬೇರೆಯವರು ಸಹ ಇದೇ ಸ್ಕೇಲನ್ನು ಕೊಡಬೇಕೆಂದು ಒತ್ತಾಯ ಮಾಡಿದಾಗ ಅದಕ್ಕೆ ರಿಜಿಸ್ಟ್ರಾರ್‌ರವರು ಅಡ್ಡಿ ಬರುತ್ತಾರೆ ಅಂತ ಹೇಳಿದರು. ಈ ತರಹ ಒಂದು ಕಡೆ ಕೊಟ್ಟು ಇನ್ನೊಂದು ಕಡೆಗೆ ಅಡ್ಡಿ ಬರುವ ಹಾಗೆ ವರ್ತಿಸುವುದು ಏತಕ್ಕೆ ? ಇದನ್ನು ನಾನು ಒಪ್ಪುವುದಿಲ್ಲ. ಎಲ್ಲರಿಗೂ ಸರ್ಕಾರೀ ಪೇಸ್ಕೇಲ್‌ನ್ನು ಕೊಡುವ ಹಾಗೆ ಮಾಡಬೇಕು ಮತ್ತು ಅವರು ಈಗ ಏನು ಒಂದು ಚಳುವಳಿ ಹೂಡಿದ್ದಾರೆ ಅದನ್ನು ಬೇಗನೆ ಇತ್ಯರ್ಥ ಮಾಡುವ ಹಾಗೆ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಆರ್. ಎಲ್. ಜಾಲಪ್ಪ ನವರು ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕು ಎಂದು ನಾನು ಹೇಳಬಯಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ೧೯೮೦ರಲ್ಲಿ ಒಂದು ಅಗ್ರಿಮೆಂಟ್ ಆಗಿತ್ತು. ಎಲ್ಲಾ ಬ್ಯಾಂಕ್‌ನವರೂ ಕೂಡ ಈ ರೀತಿಯಾದ ಒಂದು ಸ್ಕೇಲ್ ಕೊಡಬೇಕು ಎಂದು ಅಗ್ರಿಮೆಂಟ್ ಆಗಿ ಅದರಂತೆ ಕೊಡುತ್ತಾ ಇದ್ದರು. ಆವಾಗ ಇದರ ಬಗ್ಗೆ ಯಾವ ರೀತಿಯಾದ ಒಂದು ವೈಜ್ಞಾನಿಕತೆಯೂ ಇರಲಿಲ್ಲ. ಆಲ್ಲದೆ ೧೯೮೦ರಲ್ಲಿ ಇದರ ಬಗ್ಗೆ ಒಂದು ಸಮಿತಿಯನ್ನು ರಚಿಸಿದರು. ಇದಕ್ಕೆ ರಾಜ್ಯದ ಅಪೆಕ್ಸ್ ಬ್ಯಾಂಕ್‌ನ ಮ್ಯಾನೇಜಿಂಗ್ ಡೈರಕ್ಟರ್ ಅವರ ನೇತೃತ್ವದಲ್ಲಿ ೧೩ ಜಿಲ್ಲಾ ಬ್ಯಾಂಕ್ ಅಧ್ಯಕ್ಷರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಿದರು. ಅವರು ಇದರ ಬಗ್ಗೆ ತಮ್ಮ ತೀರ್ಮಾನವನ್ನು ಕೊಟ್ಟರು. ಅದನ್ನು ಜಿಲ್ಲಾ ಬ್ಯಾಂಕ್‌ಗೆ ಕಳುಹಿಸಿದರು. ಅದಕ್ಕೆ ಅವರು ನಮ್ಮ ಆಡಳಿತ ಮಂಡಲಿಯ ಮುಂದೆ ಇಟ್ಟು ಅವರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೆ ಅದನ್ನು ತಿಳಿಸುತ್ತೇನೆಂದು ಹೇಳಿದರು. ಇದರ ಬಗ್ಗೆ ರಿಜಿಸ್ಟ್ರಾರ್‌ರವರನ್ನು ಕೇಳಿದರು. ಆದರೆ ಆ ಬ್ಯಾಂಕ್‌ನವರು ಇಲ್ಲಿಯವರೆಗೂ ಪತ್ರವನ್ನು ಬರೆಯಲಿಲ್ಲ. ಮತ್ತೆ ಇದರ ಬಗ್ಗೆ ವೆಂಕಟರಮಣಗೌಡರ ಒಂದು ಸಮಿತಿ ಮಾಡಿತು. ಅವರ ವರದಿಯನ್ನು ನೋಡಿ ಅವರು ಏನು ಒಂದು ಪತ್ರ ಬರೆದಿದ್ದಾರೆ ಎಂದರೆ ಇದು ಸರಿಯಾಗಿಲ್ಲ, ನಾವೆ ನು ಇವರಿಗೆ ಸಂಬಳ ಕೊಡುತ್ತಾ ಇದ್ದೇವೋ ಅದಕ್ಕೆ ಹೋಲಿಸಿ ನೋಡಿದರೆ ಇವರು ಮೊದಲಿಗಿಂತಲೂ ಕಡಿಮೆ ತೆಗೆದುಕೊಳ್ಳುತ್ತಾರೆ ಅದಕ್ಕಾಗಿ ಇದನ್ನು ಪುನಃ ಪರಿಶೀಲಿಸಬೇಕು ಎಂದು ಪತ್ರ ವನ್ನು ಬರೆದಿದ್ದಾರೆ. ಅನಂತರ ನಮ್ಮ ರಿಜಿಸ್ಟ್ರಾರ್‌ರವರು ಎಲ್ಲಾ ಜಿಲ್ಲಾ ಬ್ಯಾಂಕ್‌ನ ಅಧ್ಯಕ್ಷರನ್ನು ಕರೆಸಿ ಸಮಾಲೋಚನೆ ಮಾಡಬೇಕೆಂದು ತೀರ್ಮಾನಿಸಿ ಅವರು ೧೨-೧೨-೮೮ರಂದು ಸಮ್ಮೇಳನ ವನ್ನು ಮಾಡಿದರು. ಆ ಸಮ್ಮೇಳನದಲ್ಲಿ ಜಿಲ್ಲಾ ಬ್ಯಾಂಕ್ ಅಧ್ಯಕ್ಷರುಗಳೊಂದಿಗೆ ಚರ್ಚೆ ಮಾಡಿದಾಗ ಅವರು ನಾವು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರ ಜೊತೆಯಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರ ಬೇಕಾಗುತ್ತದೆ ಅಂತ ಹೇಳಿದರು. ಮತ್ತೆ ಇದನ್ನು ೩ನೇ ತಾರೀಖಿಗೆ ಇಟ್ಟಿದ್ದಾರೆ. ೩ನೇ